ಭಗವಚ್ಚಿಂತನೆ ಮತ್ತು ಸತ್ಯದ ಆರಾಧನೆ ಒಂದೇ ಆಗಿರುವುದು. ಹಿಂದೆಯೂ ನೋಡಲೊಲ್ಲೆನು, ಮುಂದೆಯೂ ನೋಡಲೊಲ್ಲೆನು. ಸದ್ಯಃಕಾಲದಲ್ಲಿ ಸತ್ಯವನ್ನು ಆಶ್ರಯಿಸಿ ನಡೆಯಲು ಇಚ್ಛಿಸುತ್ತೇನೆ.

**8-1-42 ರಾತ್ರಿ 9.30**

ಬಾವಿಯ ಕೆಲಸವು ಮತ್ತೆ ಇಂದು ನಡೆಯಿತು. ಮನೆಯ ಕೆಲಸವೂ ಸ್ವಲ್ಪ ಮುಂದುವರಿಯಿತು. ಸಿಮೆಂಟಿನ ಕಾರ್ನಿಸನ್ನು ಮೇಲೆ ಹಾಕಿದರು.

'ಬೆಳಕು' ಎಂಬ ಪದ್ಯವನ್ನು ರಚಿಸಿದೆನು. ಚೆನ್ನಾಗಿದೆ.

ಇಂದು ಹೋಳಿಕಟ್ಟಿಯ ಮನೆಯಲ್ಲಿ ಧನುರ್ಮಾಸ. ಊಟಕ್ಕೆ ಹೋಗಿದ್ದೆನು.

ಸತ್ಯವಲ್ಲದೆ ಬೇರಿನ್ನಾವುದೂ ಮನುಷ್ಯನನ್ನು ಬದುಕಿಸಲಾರದು.

**ಬೆಳಕು ಬೆಳಕೆಂದಾರ್ತನಾಗಿ ಕೂಗಿದೆನಯ್ಯ!**
**ಬೆಳಕನಿತ್ತೈ, ಕೃಪಾಶರಧಿ, ಚಿನ್ಮಯಮೂರ್ತಿ!**
**ಬೆಳಕು, ಬೆಳ್ವೆಳಕು, ನಲ್ವೆಳಕು, ಸುತ್ತಲ್ ಬೆಳಕು! ನಿನ್ನ ಮೆಲ್ನಗೆಯ ಬೆಳಕು ||**
**ಅಳಿವೆನೆಂಬಂದಿನಾ ಭಯಮಳಿದುದೈ, ದೇವ!**
**ಉಳಿವೆನಿನ್ನುಳಿವೆನೈ! ಬೆಳಕನಿತ್ತೆನಗಿಂತು**
**ಬೆಳಕಿನೊಳ್ ನಡೆಯಿಸುವ ಪೊಣೆ ನಿನ್ನದೆಂದು ನಂಬಿರ್ಪೆನಾನಳಿವೆನೆಂತು? ||1||**
**ನಿಂದೆನಾನಳ್ಕುತುಂ ಕವಿದ ಕಳ್ತಲೆಯಲ್ಲಿ**
**ಮುಂದುಗಾಣದೆ ಮುಂದು ನಡೆವುದಿನ್ನೆಂತೆಂದು;**
**ತಂದೆ, ಬದುಕಿಸು, ಬದುಕಿಸೆಂದೆನಾಂ; ನೀನಿಂತು ತೋರಿದೈ ಬೆಳಕನೆನಗೆ ||**
**ಸಂದೆಗಕ್ಕೆಡೆಯಿಲ್ಲಮೀಬೆಳಕಿನೊಳ್, ಸತ್ಯ-**
**ಮೊಂದು ತನ್ನಖಿಲ ವೈಭವದಿಂದೆ ಮೆರೆದಪುದು!**
**ಸುಂದರಂ ಮಧುರಮೀಬೆಳಕಿನೊಳ್ ಜೀವನಂ! ಬೆಳಕಿದಾನಂದದಾಯಿ! ||2||**

**11-1-42 ರಾತ್ರಿ 8.45**

ಇಂದು ಪ್ರಾತಃಕಾಲದಲ್ಲಿ ಅನ್ನಪೂರ್ಣಾ ಥಿಯೇಟರಿನಲ್ಲಿ ಶ್ರೀ ಖೇರ ಅವರು 'ಶಿಕ್ಷಣದ ಆದರ್ಶಗಳು' ಎಂಬ ವಿಷಯವನ್ನು ಕುರಿತು ಇಂಗ್ಲಿಷ್‌ನಲ್ಲಿ ಉಪನ್ಯಾಸ ಮಾಡಿದರು. ನಾನೂ ಭಾಗೀರಥಿಯೂ ಹೋಗಿದ್ದೆವು. ಭಾಷಣವು ನಿರೀಕ್ಷಿಸಿದಷ್ಟು ಉದ್ಬೋಧಕವಾಗಲಿಲ್ಲ. ವಾಗ್ಝರಿಗೆ ತಡೆಯಿರಲಿಲ್ಲ, ಆದರೆ ವಿಷಯದ ದೃಷ್ಟಿಯಿಂದ ಇನ್ನೂ ಹೆಚ್ಚಾಗಿ ಸ್ಫೂರ್ತಿಪ್ರದವಾಗಬೇಕಾಗಿತ್ತು.

ನಮ್ಮ ಟ್ರೆ.ಕಾ.ನಲ್ಲಿ ಮಧ್ಯಾಹ್ನದ ಊಟಕ್ಕೆ ಆಮಂತ್ರಿತನಾಗಿ ಹೋಗಿದ್ದೆನು. ಊಟವಾದ ಬಳಿಕ ಸೊಗಸಿನ ಓದಿನ ಸಭೆ ಕೂಡಿತು.

**ನುಡಿಯೆಂಬುದದು ದೇವ-**
**ನಡಿಯಲಿರಿಸಲು ತುಲಸಿ!**
**ಕಿಡಿಸುವುದೆ ಕುತ್ಸಿತದ**
**ಹುಡಿಯಿಂದೆ ತೊಡೆದದನು? ||1||**
**ಹರಿ, ಎನ್ನ ಕಣ್ಣೊಳಿರು,**
**ಹರಿ, ಎನ್ನ ಕಿವಿಯೊಳಿರು,**
**ಹರಿ, ಎನ್ನ ಬಾಯೊಳಿರು,**
**ಹರಿ, ಎನ್ನ ಬಗೆಯೊಳಿರು! ||2||**
**ಹರಿಯೆನ್ನ ಕಣ್ಗೆ ಸುಧೆ,**
**ಹರಿಯೆನ್ನ ಕಿವಿಗೆ ಸುಧೆ,**
**ಹರಿಯೆನ್ನ ಬಾಯ್ಗೆ ಸುಧೆ,**
**ಹರಿಯೆನ್ನ ಬಗೆಗೆ ಸುಧೆ! ||3||**

**13-1-42 ರಾತ್ರಿ 8.30**

ನಿನ್ನೆ ಮತ್ತು ಇಂದು ಬಲು ದಣಿವು. ಶ್ರೀಹರಿಯ ನೆನಪು ನನಗೆ ಸಂತತವು ಇರಲಿ.

**ಇರರು ಬಾಯೊಳಗೆ ನೀ-**
**ರೆರೆವವರು ಸಾವು ಬರೆ,**
**ಹರಿ, ನಿನ್ನ ನಾಮವಾ-**
**ಗಿರಲಿ ಗಂಗಾಜಲವು!**

**17-1-42 ರಾತ್ರಿ 9.32**

ಕರ್ನಾಟಕ ಕಾಲೇಜಿನಲ್ಲಿ ಕರ್ನಾಟಕ ಸಂಘದ ವಾರ್ಷಿಕೋತ್ಸವವು. ಶ್ರೀ ಹಳಕಟ್ಟಿಯವರು ಅಧ್ಯಕ್ಷರು. ಅವರ ಭಾಷಣವು ಒಳಿತಾಯ್ತು. ಬಹಳ ಸ್ವಲ್ಪವೇ ಮಾತಾಡಿದರು. ಜೀವನದ ವಿವಿಧಾಂಗಗಳಲ್ಲಿ ಮನಸ್ಸು ಹಾಕುವುದು ಅವಶ್ಯವೆಂದು ಹೇಳಿದರು.

**ಮನಕೆ ನೂರೆಂಟು ಯೋ-**